ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ		1731
ಮಾನ್ಯ ಸದಸ್ಯರ ಹೆಸರು		ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ)
ಉತ್ತರಿಸುವ ಸಚಿವರು		ಮಾನ್ಯ ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)
ಉತ್ತರಿಸಬೇಕಾದ ದಿನಾಂಕ		23-03-2020
	ಪ್ರಶ್ನೆ	ಉತ್ತರ
(ಅ)	ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಲ್ಲಿ 2006ರ ಪೂರ್ವದಲ್ಲಿ ಉಪನ್ಯಾಸಕರಾಗಿ/ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ನೇಮಕಗೊಂಡು ತದನಂತರ ಅಸೋಸಿಯೇಟ್ ಪ್ರೊಫೆಸರ್ ಹಾಗೂ ಪ್ರೊಫೆಸರಾಗಿ ಪದೋನ್ನತಿ ಹೊಂದಿದವರಿಗೆ ಹಳೆ ಪಿಂಚಣಿ ಯೋಜನೆಯನ್ನು ಮುಂದುವರೆಸ ಲಾಗಿದೆಯೇ; (ವಿವರ ನೀಡುವುದು);	ಹೌದು. ವಿಶ್ವವಿದ್ಯಾಲಯಗಳಲ್ಲಿ , ದಿನಾಂಕ: 01-04-2006ಕ್ಕಿಂತ ಪೂರ್ವದಲ್ಲಿ ಉಪನ್ಯಾಸಕ/ಸಹಾಯಕ ಪ್ರಾಧ್ಯಾಪಕರಾಗಿ ನೇಮಕಗೊಂಡವರು ಸರ್ಕಾರದ ನಿಯಮಗಳನುಸಾರ ಹಳೇ ಪಿಂಚಣಿ ಸೌಲಭ್ಯಗಳನ್ನು ಪಡೆಯಲು ಅರ್ಹರಾಗಿರುತ್ತಾರೆ. ಯುಜಿಸಿ ನಿಯಮಗಳನುಸಾರ ವೃತ್ತಿ ಪದೋನ್ನತಿ ಯೋಜನೆಯಡಿ ಅರ್ಹತೆಗನುಗುಣವಾಗಿ ಸಹ ಪ್ರಾಧ್ಯಾಪಕ/ಪ್ರಾಧ್ಯಾಪಕರಾಗಿ ಬಡ್ತಿ ಹೊಂದಿದ್ದರೂ ಸಹ ಅವರ ನೂತನ ಹುದ್ದೆಯ ಧಾರಣೆಯು ಮೂಲ ಹುದ್ದೆಯಾದ ಸಹಾಯಕ ಪ್ರಾಧ್ಯಾಪಕ ಹುದ್ದೆಯ ಮೇಲಿರುತ್ತದೆ. ವೃತ್ತಿ ಪದೋನ್ನತಿ ಯೋಜನೆಯಡಿ ಬಡ್ತಿ ಪಡೆದ ನಂತರ ಹೊಸ ಹುದ್ದೆಗಳಾದ ಸಹ ಪ್ರಾಧ್ಯಾಪಕ/ಪ್ರಾಧ್ಯಾಪಕ ಹುದ್ದೆಗಳು ಹೊಸ ಹುದ್ದೆಗಳೆಂದು ಪರಿಗಣಿಸಲ್ಪಡುವುದಿಲ್ಲ.
(ಆ)	2006ರ ಪೂರ್ವದಲ್ಲಿ ಪದವಿ ಕಾಲೇಜುಗಳಲ್ಲಿ ಉಪನ್ಯಾಸಕರಾಗಿ / ಅಸಿಸ್ಟೆಂಟ್ ಪ್ರೊಫೆಸರ್ ಆಗಿ ನೇಮಕಗೊಂಡ/ ತದನಂತರ ವಿಶ್ವವಿದ್ಯಾಲಯಗಳಲ್ಲಿ ಅಸೋಸಿಯೇಟ್ ಹಾಗೂ ಪ್ರೊಫೆಸರ್ ಆಗಿ ನೇಮಕ ಹೊಂದಿದವರಿಗೆ ಹಳೆ ಪಿಂಚಣಿ ಯೋಜನೆಯನ್ನು ಮುಂದುವರೆಸ ಲಾಗಿದೆಯೇ; (ಮಾಹಿತಿ ನೀಡುವುದು)	ಇಲ್ಲ. ದಿನಾಂಕ: 01-04-2006ರ ನಂತರದ ನೇರ ನೇಮಕಾತಿಗಳನ್ನು ಹೊಸ ನೇಮಕಾತಿಗಳೆಂದು ಪರಿಗಣಿಸಲಾಗುವುದರಿಂದ, ಹಿಂದಿನ ಪಿಂಚಣಿ ಯೋಜನೆಯ ವ್ಯಾಪ್ತಿಯಲ್ಲಿಯೇ ಮುಂದುವರೆಸಲು ಅವಕಾಶವಿರುವುದಿಲ್ಲ.
(ಇ)	ಮೇಲೆ ತಿಳಿಸಿದ ವಿಷಯಗಳಿಗೆ ಸಂಬಂಧಿಸಿದಂತೆ 2006ರ ನಂತರ ಪದೋನ್ನತಿ ಹೊಂದಿ ಅಸೋಸಿಯೇಟ್ ಪ್ರೊಫೆಸರ್ ಹಾಗೂ ಪ್ರೊಫೆಸರ್ ಆಗಿ ಪದೋನ್ನತಿ/ನೇಮಕಾತಿ ಹೊಂದಿ ನಿವೃತ್ತಿಯಾದ ಸಿಬ್ಬಂದಿಗೆ 2-3 ವರ್ಷ ಕಳೆದರೂ ಯಾವ ಪಿಂಚಣಿ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಮತ್ತು ಈ ಸಮಸ್ಯೆಗೆ ಸರ್ಕಾರ ಯಾವ ಪರಿಹಾರವನ್ನು ಸೂಚಿಸಿದೆ (ಸಂಪೂರ್ಣ ವಿವರ ನೀಡುವುದು)	ಬಂದಿಲ್ಲ.

ಸಂಖ್ಯೆ: ಇಡಿ 125 ಯುಎನ್‌ಇ 2020

(ಡಾ: ಅಶ್ವಥ್ ನಾರಾಯಣ ಸಿ.ಎನ್.)
ಉಪ ಮುಖ್ಯಮಂತ್ರಿಗಳು
(ಉನ್ನತ ಶಿಕ್ಷಣ, ಐಟಿ & ಬಿಟಿ,
ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ)